(ಳ) ಬಿಜಾಪುರ ಜಿಲ್ಲೆಯ ಪದವಿ ಪೂರ್ವ ಕಾಲೇಜುಗಳಿಗೆ ಶಿಕ್ಷಕರ ಸಂಬಳವನ್ನು ಬಿಡುಗಡೆ ಮಾಡದಿರುವುದು.

ಶ್ರೀ ಬಾಬುರೆಡ್ಡಿ ವಿ. ತುಂಗಳ (ಬೀಳಗಿ).— ಸನ್ಮಾನ್ಯ ಅಧ್ಯಕ್ಷರೆ, ವಿಜಾಪುರ ಜಿಲ್ಲೆಯ ಯೋಜನೆಯಡಿಯಲ್ಲಿ ಬರುವ ತೊದಲಬಾಗಿ ತಿಕೋಟಾ, ಹಲಸಂಗಿ, ಹೊನವಾಡ, ಮನಗೂಳಿ ಮತ್ತು ತಾಳೀಕೋಟೆ ಪದವಿಪೂರ್ವ ಕಾಲೇಜುಗಳ ಸಿಬ್ಬಂದಿಗೆ ೧೮ ತಿಂಗಳುಗಳ ಬಾಕೀ ವೇತನ ಬಿಡುಗಡೆಯಾಗದೇ ಇರುವುದರಿಂದ ಉಪನ್ಯಾಸಕರು ತೀವ್ರ ಆರ್ಥಿಕ ತೊಂದರೆಗೊಳಗಾಗಿದ್ದಾರೆ. ಸರ್ಕಾರವು ಈ ಕಾಲೇಜುಗಳನ್ನು ೧೯೮೬ ಜೂನ್‌ನಿಂದ ವೇತನ ಅನುದಾನಕ್ಕೆ ಒಳಪಡಿಸಿ, ೧–೧–೧೯೮೮ರಿಂದ ನೇರ ವೇತನ ಅನುದಾನಕ್ಕೊಳಪಡಿಸಲಾಗಿದೆ. ಇದರಿಂದ ೧–೭–೮೬ರಿಂದ ೧–೧–೮೮ರ ವರೆಗಿನ ವೇತನದ ಬಿಡುಗಡೆಯಾಗಿಲ್ಲ. ಈ ಕುರಿತು ಕಳೆದ ವಿಧಾನಸಭಾ ಅಧಿವೇಶನದಲ್ಲಿ ಅಂದರೆ ತಾ. ೬–೧೦–೮೮ ರಂದು ನಾವು ತಮ್ಮ ಗಮನ ಸೆಳೆದಾಗ ಒಂದು ತಿಂಗಳ ಒಳಗಾಗಿ ವೇತನ ಬಿಡುಗಡೆ ಮಾಡುವ ಭರವಸೆ ನೀಡಿದ್ದಿರಿ. ಆದರೆ ಈ ವರೆಗೂ ಹಣ ಬಿಡುಗಡೆಯಾಗಿಲ್ಲ. ತುಟ್ಟಿಭತ್ಯೆ ಮುಂತಾದ ಬಾಕಿ ವೇತನವನ್ನು ಬಿಡುಗಡೆ ಮಾಡಿ ಈ ಆರು ಪದವೀಪೂರ್ವ ಕಾಲೇಜುಗಳ ಸಿಬ್ಬಂದಿಯ ೧೮ ತಿಂಗಳುಗಳ ಬಾಕಿ ವೇತನ ತಡೆಹಿಡಿಯಲು ಕಾರಣವೇನು? ಈ ಕಾಲೇಜುಗಳ ಜೊತೆ ಆರಂಭವಾದ ಬೆಳಗಾವಿ ಜಿಲ್ಲೆಯ ಮೂಡಲಗಿ ಹಾಗೂ ಧಾರವಾಡ ಜಿಲ್ಲೆಯ ದರಗ ಪದವಿ ಪೂರ್ವ ಕಾಲೇಜುಗಳ ಸಿಬ್ಬಂದಿಗೆ ಎಲ್ಲಾ ಬಾಕೀ ವೇತನ ಸಂದಾಯವಾಗಿರುವಾಗ ಬಿಜಾಪುರ ಜಿಲ್ಲೆಯ ಈ ಕಾಲೇಜುಗಳಿಗೆ ಬಾಕೀ ನೀಡಲು ಯಾವ ತೊಂದರೆ ಇದೆ? ಈ ಕುರಿತು ಸಿಬ್ಬಂದಿ ವರ್ಗ ಹಲವಾರು ಬಾರಿ ಸರ್ಕಾರದ ಗಮನ ಸೆಳೆದರೂ ಪರಿಹಾರ ಸಿಕ್ಕಿಲ್ಲ. ಕಾರಣ, ಈ ವಿಷಯವಾಗಿ ಸಚಿವಾಲಯದಿಂದ ಆಜ್ಞೆ ಹೊರಡಿಸಿ ೧೮ ತಿಂಗಳುಗಳ ಬಾಕಿ ವೇತನ ಬಿಡುಗಡೆಯಾಗುವಂತೆ ಮಾಡಬೇಕು.

ಈ ಬೇಡಿಕೆಯ ಕುರಿತು ಕೂಡಲೇ ಕ್ರಮ ತೆಗೆದುಕೊಳ್ಳಬೇಕೆಂದು ತಮ್ಮ ಮುಖಾಂತರ ಮಾನ್ಯ ಶಿಕ್ಷಣ ಸಚಿವರ ಗಮನ ಸೆಳೆಯು ಬಯಸುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ,— ಮಾನ್ಯ ಅಧ್ಯಕ್ಷರೆ, ಮಾನ್ಯ ಶಿಕ್ಷಣ ಸಚಿವರ ಪರವಾಗಿ ಈ ಈ ಹೇಳಿಕೆಯನ್ನು ಸದನದ ಮುಂದೆ ಹೇಳಲಿಕ್ಕೆ ಬಯಸುತ್ತೇನೆ.

೧೯೮೬ ಜೂನ್‌ನಿಂದ ಈ ಕಾಲೇಜುಗಳು ವೇತನ ಅನುದಾನಕ್ಕೆ ಅರ್ಹತೆ ಪಡೆದಿದ್ದರೂ ೧–೧–೧೯೮೮ರಂದು ಈ ಕಾಲೇಜುಗಳನ್ನು ನೇರ ವೇತನ ಅನುದಾನಕ್ಕೆ ಒಳಪಡಿಸಲಾಗಿದೆ. ಈಗ ಆರ್ಥಿಕ ವಿನಿಯೋಗ ಆದೇಶ ಜಾರಿಯಲ್ಲಿರುವುದರಿಂದ ೧೯೮೬ನೇ ಜೂನ್‌ನಿಂದ ೧–೧–೧೯೮೮ರವರೆಗೆ ಇರುವ ಬಾಕಿ ವೇತನ ಬಿಡುಗಡೆ ಮಾಡಲು ಸಾಧ್ಯವಿಲ್ಲ. ಹಾಗೂ ಇದೇ ತರಹ ಯಾವ ಕಾಲೇಜಿಗೂ ಬಾಕಿ ವೇತನ ಅನುದಾನ ಬಿಡುಗಡೆ ಮಾಡಿಲ್ಲ. ಮುಂದೆ ಆರ್ಥಿಕ ವಿನಿಯೋಗ ತೆಗೆದು ಹಾಕಿದ ನಂತರ ಈ ಬಾಕಿ ವೇತನವನ್ನು ಬಿಡುಗಡೆ ಮಾಡುವ ವಿಷಯವನ್ನು ಪರಿಶೀಲಿಸಲಾಗುವುದು.

(ಶ) ಮಹದೇಶ್ವರ ಬೆಟ್ಟದ ರೇಂಜ್ ಫಾರೆಸ್ಟ್ ಆಫೀಸರ್ ಮೆಟ್ಟೂರು ಜಲಾಶಯ ಮುಳುಗಡೆ ಪ್ರದೇಶದಲ್ಲಿ ವ್ಯವಸಾಯ ಮಾಡುತ್ತಿರುವ ರೈತರುಗಳಿಗೆ ತೊಂದರೆ ಕೊಡುತ್ತಿರುವುದು

ಶ್ರೀ ಜಿ. ರಾಜೂಗೌಡ.— ಮೈಸೂರು ಜಿಲ್ಲೆ ಕೊಳ್ಳೇಗಾಲ ತಾಲ್ಲೂಕಿಗೆ ಸೇರಿದ ಮಹದೇಶ್ವರ ಬೆಟ್ಟದಲ್ಲಿರುವ ಅಸಿಸ್ಟೆಂಟ್ ಕನ್ಸರ್‌ವೇಟರ್ ಆಫ್ ಫಾರೆಸ್ಟ್‌ರವರು ತಮ್ಮ ಅಧಿಕಾರವನ್ನು ದುರುಪಯೋಗಪಡಿಸಿಕೊಂಡು ಅನಾವಶ್ಯಕವಾಗಿ ಪಾಲಾರ್‌ನಿಂದ ಜಂಬೂ ಪಟ್ಟಿಯವರೆವಿಗೆ ಕಾವೇರಿ ನದಿಯ ದಂಡೆಯಲ್ಲಿರುವ ಮೆಟ್ಟೂರು ಜಲಾಶಯದ ಮುಳುಗಡೆ ಪ್ರದೇಶದಲ್ಲಿ ನೀರು ಬತ್ತಿದಾಗ ವ್ಯವಸಾಯ ಮಾಡುತ್ತಿರುವ ರೈತರುಗಳಿಗೆ ಕಿರುಕುಳ ಕೊಡುತ್ತಿದ್ದಾರೆ. ಮೇಲ್ಕಂಡ ವಿ.ಸಿ.ಎಫ್.ರವರು ಅನಭಿಷಕ್ತ ದೊರೆಯಂತೆ ವರ್ತಿಸುತ್ತಿದ್ದಾರೆ. ಇವರ ವರ್ತನೆ, ಆಟಾಟೋಪಗಳನ್ನು ನೋಡಿದಾಗ ಇವರು ಸಾರ್ವಜನಿಕರ ಸೇವಕರಲ್ಲ ಎಂಬಂತೆ ಕಾಣುತ್ತದೆ.

ಗೋಪಿನತ್ರ ಗ್ರಾಮದ ಪಕ್ಕದಲ್ಲಿರುವ ಕಾವೇರಿ ನದಿಯ ಎರಡೂ ದಂಡೆಗಳಲ್ಲೂ ಬಹಳ ಹಿಂದಿನಿಂದಲೂ ರೈತರುಗಳು ವಂಶಪಾರಂಪರ್ಯವಾಗಿ ಜೋಳ ಮತ್ತು ಕಬ್ಬು ಬೆಳೆಗಳನ್ನು ಬೆಳೆಯುತ್ತಾ ಬರುತ್ತಿರುವುದು ಸರಿಯಷ್ಟೆ. ೧೯೫೬ರಲ್ಲಿ ರಾಜ್ಯ ಪುನರ್‌ವಿಂಗಡನೆ ಆದಮೇಲೆ ಕಾವೇರಿ ನದಿಯ ಪಶ್ಚಿಮ ದಂಡೆಯು ಕರ್ನಾಟಕಕ್ಕೂ, ಪೂರ್ವದ ಕಾವೇರಿ ದಂಡೆಯು ತಮಿಳು ನಾಡಿಗೂ ಸೇರಿದ್ದಾಗಿದೆ.